# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ,
# ಸಿಂದಗಿ.

**ಸಿ.ಸಿ.ನಂ.2249/2025**

ಫಿರ್ಯಾದಿಃ ಕರ್ನಾಟಕ ರಾಜ್ಯ ಸರ್ಕಾರ
(ಅಬಕಾರಿ ನೀರಿಕ್ಷರು ಸಿಂದಗಿ ವಲಯ)

- ವಿರುದ್ದ -

ಆರೋಪಿತರುಃ

1. ಮಹಾಂತೇಶ ತಂಃ ಗುರುನಾಥ ನಾಯೆ್ಕೋಡಿ
ಸಾಃ ಬೋರಗಿ, ತಾಃಸಿಂದಗಿ,
ಜಿ: ವಿಜಯಪುರ.

## ದೋಷಾರೋಪಣೆ

ಶ್ರೀಮತಿ ಪಂಕಜಾ ಕೊಣ್ಣೂರ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಿಂದಗಿ, ಆದ ನಾನು, ಆರೋಪಿತನಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

ದಿನಾಂಕ: 23/03/2024 ರಂದು ಮಧ್ಯಾಹ್ನ 12:15 ಗಂಟೆಯ ಸುಮಾರಿಗೆ, ಫೀರ್ಯಾದಿದಾರು ಮತ್ತು ಸಿಬ್ಬಂದಿಯಾದ ಎಮ್.ಜೆ.ಮೊಕಾಶಿ ಅಬಕಾರಿ ಮುಖ್ಯ ಪೇದೆ ಮತ್ತು ಗೃಹ ರಕ್ಷಕ ಸಿಬ್ಬಂದಿಗಳಾದ ಜಾವೀಧ ಹುಸೇನಸಾಬ ಚೌಧರಿ ಹಾಗೂ ಇಮಾಮ ಬಂದೇನವಾಜ ಮೇಲಿನಮನಿ ಕೂಡಿಕೊಂಡು ಸಿಂದಗಿ ವಲಯದ ಸಿಂದಗಿ ಮತಕ್ಷೇತ್ರದ ಸಿಂದಗಿ ಪಟ್ಟಣದ ಬಂದಾಳ ಕ್ರಾಸ ಬಳಿ ರಸ್ತೆಗಾವಲು ಮಾಡುತ್ತಿರುವಾಗ ಮಾದ್ಯಾಹ್ನ 12:30 ಗಂಟೆ ಸುಮಾರಿಗೆ ಒಂದು ದ್ವಿ ಚಕ್ರ ವಾಹನ ಅನುಮಾನಾಸ್ಪದವಾಗಿ ನಮ್ಮ ಕಡೆ ಬರುತ್ತಿರುವದನ್ನು ಗಮನಿಸಿ ಸಿಬ್ಬಂದಿಗಳ ಸಹಾಯದಿಂದ ತಡೆದು ನಿಲ್ಲಿಸಿ ಆತನ ಬಗ್ಗೆ

ವಿಚಾರಿಸಲಾಗಿ ನೀವು ಆರೋಪಿ ನಿಮ್ಮ ಹೆಸರು ಮಹಾಂತೇಶ ಗುರುನಾಥ ನಾಯ್ಕೋಡಿ ಹೇಳಿದ್ದಿರಿ, ನಂತರ ದ್ವಿ ಚಕ್ರ ವಾಹನದ ಪೆಟ್ರೋಲ ಟ್ಯಾಂಕಿನ ಚೀಲದ ಮೇಲೆ ಏನಿದೆ ಎಂದು ಕೇಳಲಾಗಿ ನೀವು ಗಾಬರಿಯಿಂದ ಅಸ್ಪಷ್ಟ ಉತ್ತರ ನೀಡಿದ್ದಿರಿ, ನಿಮ್ಮವರ್ತನೆ ಅನುಮಾನಗೊಂಡು ಅಲ್ಲಿಯೇ ನಿಂತಿದ್ದ ಗೃಹ ರಕ್ಷಕ ದಳ ಸಿಬ್ಬಂದಿಗಳಾದ ಜಾವೀಧ ಚೌಧರಿ ಇಮಾಮ ಮೇಲಿನಮನಿ ಪಂಚರನ್ನಾಗಲು ಒಪ್ಪಿಕೊಂಡರು, ನಂತರ ಸದರಿ ಚೀಲವನ್ನು ತೆಗೆದು ನೋಡಲಾಗಿ ಮದ್ಯದ ಗಾಜಿನ ಬಾಟಲಿಗಳು ಮತ್ತು ಮದ್ಯದ ಟೆಟ್ರಾಪ್ಯಾಕೇಟಗಳು ಹಾಗೂ ಬೀಯರವುಳ್ಳ ಗಾಜಿನ ಬಾಟಲಿಗಳು ಇರುವದು ಕಂಡು ಬಂದವು, ನಂತರ ಅವುಗಳನ್ನು ಎಣಿಕೆ ಮಾಡಲಾಗಿ 1) ಮ್ಯಾಕಡೋವೆಲ್ಲ ನಂ-1 ವಿಸ್ಕಿ ಅಂತ ಮುದ್ರಿತ 180 ಎಮ್.ಎಲ್ ನ 8 ಮದ್ಯ ತುಂಬಿದ ಗಾಜಿನ ಬಾಟಲಿಗಳು 2)ಇಂಪಿರಿಯಲ್ ಬ್ಲೂ ವಿಸ್ಕಿ ಅಂತ ಮುದ್ರಿತ 180 ಎಮ್.ಎಲ್ ನ 5 ಮದ್ಯ ತುಂಬಿದ ಗಾಜಿನ ಬಾಟಲಿಗಳು 3) ಬ್ಯಾಗಪೈಪರ ವಿಸ್ಕಿ ಅಂತ ಮದ್ರಿತ 180 ಎಮ್.ಎಲ್ ನ 9 ಮದ್ಯ ತುಂಬಿದ ಟೆಟ್ರಾಪ್ಯಾಕೇಟಗಳು 4) ಮ್ಯಾಕಡೋವೆಲ್ಸ ನಂ-1 ಲಕ್ಝರಿ ವಿಸ್ಕಿ ಅಂತ ಮುದ್ರಿತ 90 ಎಮ್.ಎಲ್ ನ 6 ಮದ್ಯ ತುಂಬಿದ ಟೆಟ್ರಾಪ್ಯಾಕೇಟಗಳು ಮತ್ತು ಒಂದು ಕಿಂಗ್ ಫೀಪರ್ ಸ್ಟ್ರಾಂಗ್ ಬೀಯರ ಅಂತ ಮುದ್ರಿತ ರಟ್ಟಿನ ಪೆಟ್ಟಿಗೆಯಲ್ಲಿ 1) ಕಿಂಗ್ ಫಿಷರ್ ಸ್ಟ್ರಾಂಗ್ ಬೀಯರ ಅಂತ ಮುದ್ರಿತ 650 ಎಮ್.ಎಲ್ ನ 6 ಬೀಯರವುಳ್ಳ ಗಾಜಿನ ಬಾಟಲಿಗಳು 2) ಬಡವೈಸರ ಸ್ಟ್ಯಾಂಗ್ ಬೀಯರ ಅಂತ ಮುದ್ರಿತ 650 ಎಮ್.ಎಲ್ ನ 6 ಬೀಯರವುಳ್ಳ ಗಾಜಿನ ಬಾಟಲಿಗಳು ಇರುವದು ಕಂಡು ಬಂದವು, ನಂತರ ಅವುಗಳ ಬಗ್ಗೆ ವಿಚಾರಿಸಲಾಗಿ ಅವುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿರುವುದಾಗಿ ತಿಳಿಸಿದನು, ನಂತರ ವಾಹನವನ್ನು ತಪಾಸಣೆ ಮಾಡಲಾಗಿ ಒಂದು ಕಪ್ಪು ಬಣ್ಣದ ಹಿರೋ ಕಂಪನಿಯ ಸ್ಪೆಂಡರ್ ಪ್ರೋ ದ್ವಿ ಚಕ್ರ ವಾಹನ ನೊಂದಣಿ ಸಂಖ್ಯೆ-ಕೆಎ-28-ಇಎಫ್-3830 ಇರುವದು ಕಂಡು ಬಂದಿತು.

ನಂತರ ನಿಮಗೆ ಮದ್ಯವನ್ನು ಸಾಗಾಣಿಕೆ ಮಾಡಲು ಪರ್ಮಿಟಗಳೇನಾದರೂ ಇದೇಯಾ ಎಂದು ವಿಚಾರಿಸಲಾಗಿ ನೀವು ಇಲ್ಲಾ ಎಂದು ತಿಳಿಸಿದ್ದಿರಿ, ಆ ಮೂಲಕ ಅಬಕಾರಿ ಕಾಯ್ದೆ 1965 ರ ಕಲಂ 11, 14, 15 ರ ಉಲ್ಲಂಘನೆಯಾಗಿದ್ದು ಹಾಗೂ ಅದೇ ಕಾಯ್ದೆ ಕಲಂ 32, 38(ಎ), 43 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತಿರಿ.

ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

<u>ಆರೋಪಿತರ ಹೇಳಿಕೆ</u>

ಪ್ರಶ್ನೆ-1 : ಈಗ ಓದಿ ಹೇಳಿದ ಆರೋಪಣೆ ಅರ್ಥವಾಗಿದೆಯೇ?

ಉತ್ತರ :

ಪ್ರಶ್ನೆ-2 : ಹಾಗಿದ್ದಲ್ಲಿ ನಿಮ್ಮ ಸಮಜಾಯಿಸಿಕೆ ಏನು? ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕು?

ಉತ್ತರ :

(ಈ ಮೇಲಿನ ದೋಷಾರೋಪಣೆಯನ್ನು ಅಪಾದಿತರಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಗಿ ಅಪಾದಿತರು ತಿಳಿಸಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಪ್ರಮಾಣಿಕರಿಸುತ್ತೇನೆ)

ದಿನಾಂಕ

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,
ಸಿಂದಗಿ.

ಆರೋಪಿ ಇವರ ಸಹಿಃ